ಸಾಮಾನ್ಯವಾಗಿ, ಒಬ್ಬ ಶಿಕ್ಷಕನನ್ನು ಸ್ನೇಹಿತ, ತತ್ತ್ವಜ್ಞಾನಿ ಅಥವಾ ಮಾರ್ಗದರ್ಶಕನಿಗೆ ಹೋಲಿಸುವ ಪರಿಪಾಠ ಇತ್ತು. ಆದರೆ, ಬದಲಾದ ಕಾಲಮಾನಕ್ಕನುಗುಣವಾಗಿ ಅವನ ಜವಾಬ್ದಾರಿ ಹೆಚ್ಚಾದುದರಿಂದ ಅವನನ್ನು ಮಾಹಿತಿ ಪೂರೈಕೆದಾರ, ಮಾದರಿ ವ್ಯಕ್ತಿ, ಸಹಾಯಕ, ಮೌಲ್ಯಮಾಪಕ, ಸಂಪನ್ಮೂಲ ವ್ಯಕ್ತಿ, ನಿರ್ಮಾತೃ ಮುಂತಾದ ಶಬ್ದಗಳಿಂದ ಬಣ್ಣಿಸಬಹುದು. ಈಗಿನ ಕಾಲದಲ್ಲಿ ವಿದ್ಯಾರ್ಥಿಗಳಿಗೆ ಹೆಚ್ಚು ಹೆಚ್ಚು ಮಾಹಿತಿಯನ್ನು ನೀಡಬೇಕಾಗಿದೆ. ಅಂತಹ ಮಾಹಿತಿಯನ್ನು ಒದಗಿಸಲು ನವೀನ ತಂತ್ರಜ್ಞಾನವನ್ನು ಉಪಯೋಗಿಸುವ ಆವಶ್ಯಕತೆ ಹಾಗೂ ಅನಿವಾರ್ಯತೆ ತಲೆದೋರಿದೆ. ಹಳೆಯ ವಿಧಾನಗಳ ಜೊತೆಗೆ ನವೀನತೆಯನ್ನು ಅಳವಡಿಸಿಕೊಂಡು ಶಿಕ್ಷಕರು ಬೋಧನೆ ಮಾಡಬೇಕಾಗಿದೆ. ವಿದ್ಯಾರ್ಥಿಗಳ ಮೇಲೆ ಶಿಕ್ಷಕನು ಪ್ರಭಾವ ಬೀರುವುದರಿಂದ ಅವನು ಮಾದರಿ ವ್ಯಕ್ತಿಯಾಗಿರಬೇಕು. ವಿದ್ಯಾರ್ಥಿಗಳು, ಶಿಕ್ಷಕ ಕೇವಲ ಏನು ಹೇಳುತ್ತಾನೆಂಬುದನ್ನು ಕೇಳದೆ, ಆತನಲ್ಲಿರುವ ಜ್ಞಾನ, ಕೌಶಲ, ಮಾನಸಿಕ ಸ್ಥಿತಿ ಹಾಗೂ ಆಚರಣೆಗಳನ್ನೂ ಗಮನಿಸುತ್ತಾರೆ. ಹೀಗಾಗಿ ಈ ಎಲ್ಲದರಲ್ಲಿಯೂ ಪ್ರಾವೀಣ್ಯತೆಯನ್ನು ಹೊಂದಿದಾಗ ಮಾತ್ರ, ಒಬ್ಬ ಶಿಕ್ಷಕನು ತನ್ನ ವಿದ್ಯಾರ್ಥಿಗಳ ಮೇಲೆ ಪರಿಣಾಮಕಾರಿ ಪ್ರಭಾವವನ್ನು ಉಂಟುಮಾಡಲು ಸಾಧ್ಯ. ವಿದ್ಯಾರ್ಥಿಗಳ ಮೌಲ್ಯಮಾಪನವನ್ನು ಸರಿಯಾಗಿ ಮಾಡಿ, ಅವರಲ್ಲಿನ ಧನಾತ್ಮಕ ಅಂಶಗಳನ್ನು ಪೋಷಿಸುವುದು ಶಿಕ್ಷಕನ ಪ್ರಮುಖ ಕರ್ತವ್ಯಗಳಲ್ಲೊಂದು. ಶಿಕ್ಷಕನಾದವನು ವಿದ್ಯಾರ್ಥಿಯ ವ್ಯಕ್ತಿತ್ವದಲ್ಲಿನ ಋಣಾತ್ಮಕವಾದ ಅಂಶಗಳನ್ನು ತೊಡೆದುಹಾಕಿ ಬಹುಮುಖ ವ್ಯಕ್ತಿತ್ವ ನಿರ್ಮಾಣ ಮಾಡುವ ಮಾನವಶಿಲ್ಪಿಯಾಗಿದ್ದಾನೆ. ವಿದ್ಯಾರ್ಥಿಗಳ ಸಹಾಯಕನಾಗಿ, ಬದಲಾದ ಸನ್ನಿವೇಶಕ್ಕನುಗುಣವಾಗಿ ಸಮಾಜದ ಹಾಗೂ ದೇಶದ ಎಲ್ಲ ರಂಗಗಳಿಗೆ ಮಾನವ ಸಂಪನ್ಮೂಲವನ್ನು ಒದಗಿಸುವ ಗುರುತರವಾದ ಹೊಣೆಗಾರಿಕೆ ಆಧುನಿಕ ಶಿಕ್ಷಕನ ಮೇಲಿದೆ. ದೇಶದ ಒಟ್ಟಾರೆ ಆರ್ಥಿಕ, ಸಾಮಾಜಿಕ, ರಾಜಕೀಯ, ಧಾರ್ಮಿಕ ಹಾಗೂ ಸಾಂಸ್ಕೃತಿಕ ಬದಲಾವಣೆಗಳನ್ನು ಗಮನದಲ್ಲಿಟ್ಟುಕೊಂಡು, ಸೂಕ್ತ ಯೋಜನೆಯ ಮೂಲಕ ಇಡೀ ವ್ಯವಸ್ಥೆಯನ್ನು ಸುಧಾರಿಸುವ, ಬೆಳೆಸುವ ಸಂಪೂರ್ಣ ಜವಾಬ್ದಾರಿ ಶಿಕ್ಷಕರ ಮೇಲಿದೆ.

ಭಾರತ ಇಂದು ಹತ್ತುಹಲವು ಸಮಸ್ಯೆಗಳ ಸುಳಿಗೆ ಸಿಲುಕಿಕೊಂಡಿದೆ. ಭಯೋತ್ಪಾದನೆ, ಭ್ರಷ್ಟಾಚಾರ, ಮೌಲ್ಯಗಳ ಅಧಃಪತನ, ಬಡತನ, ನಿರುದ್ಯೋಗದಂತಹ ಸಮಸ್ಯೆಗಳು ನಮ್ಮ ದೇಶದ ಬೆಳವಣಿಗೆಗೆ ಅಡ್ಡಗಾಲಾಗಿವೆ. ಜಾಗತೀಕರಣ ಹಲವಾರು ಅವಕಾಶಗಳನ್ನು ಸೃಷ್ಟಿಸುವುದರ ಜೊತೆಗೆ, ಅನೇಕ ಸವಾಲುಗಳನ್ನೂ ತಂದೊಡ್ಡಿದೆ, ಪರಸ್ಪರರಲ್ಲಿ ಸ್ಪರ್ಧೆ ಹೆಚ್ಚಾಗಿದೆ, ಸಾಮಾಜಿಕ ಮೌಲ್ಯಗಳನ್ನು ಕಡೆಗಣಿಸಲಾಗಿದೆ. ವರಕವಿ ದ.ರಾ. ಬೇಂದ್ರೆ ಹೇಳುವಂತೆ ಎಲ್ಲೆಡೆ, ಕುರುಡು ಕಾಂಚಾಣದ ತಾಂಡವ ನೃತ್ಯ ನಡೆಯುತ್ತಿದೆ. ಗಾಂಧೀಜಿಯವರು ಯಾವುದನ್ನು ಸಾಮಾಜಿಕ ಅನಿಷ್ಟಗಳೆಂದು ಕರೆದಿದ್ದರೋ, ಅವೆಲ್ಲವೂ ಇಂದಿನ ಸಮಾಜದಲ್ಲಿ ರುದ್ರನರ್ತನ ಮಾಡುತ್ತಿವೆ. ದೇಶಕ್ಕೆ ಸ್ವಾತಂತ್ರ್ಯ ಬಂದು ೬೪ ವರ್ಷಗಳು ಕಳೆದಿದ್ದರೂ, ಹಳ್ಳಿಗಳ ಸ್ಥಿತಿ ಇನ್ನೂ ಚಿಂತಾಜನಕವಾಗಿಯೇ ಉಳಿದಿದೆ. ರಾಜಕೀಯ ಅಸ್ಥಿರತೆ ಎಲ್ಲ ರಾಜಕೀಯ ಪಕ್ಷಗಳನ್ನೂ ಕಾಡುತ್ತಿದೆ. ನಮ್ಮ ದೇಶದ ಸಂಸ್ಕೃತಿಯ ಮೇಲೆ ಅವ್ಯಾಹತವಾಗಿ ದಾಳಿ ನಡೆಯುತ್ತಲೇ ಇದೆ. ಯುವಕರು ದಾರಿ ತಪ್ಪುತ್ತಿದ್ದಾರೆ. ಇಂಥ ಸನ್ನಿವೇಶದಲ್ಲಿ ಈ ದೇಶವನ್ನು ರಕ್ಷಿಸುವ, ಬೆಳೆಸುವ ಜವಾಬ್ದಾರಿ ಶಿಕ್ಷಕನ ಮೇಲಿದೆ. ಸ್ವಾಮಿ ವಿವೇಕಾನಂದರು ಹೇಳುವಂತೆ ಶಿಕ್ಷಣದಿಂದಲೇ ಇವೆಲ್ಲವನ್ನೂ ಸುಧಾರಿಸಬಹುದು. ಶಿಕ್ಷಣವು ಜನಾಂಗವನ್ನು ರೂಪಿಸುತ್ತದೆ. ಅದರಲ್ಲೂ, ಶಿಕ್ಷಕರೇ ಒಂದು ಜನಾಂಗವನ್ನು ರೂಪಿಸುವ ರೂವಾರಿಗಳಾಗಿದ್ದಾರೆ.

ಒಂದು ದೇಶದ ಸಮಾಜ ಬದಲಾಗಬಹುದು, ಅರ್ಥವ್ಯವಸ್ಥೆ ಬದಲಾಗಬಹುದು, ರಾಜಕೀಯ ಪರಿಸ್ಥಿತಿ ಬದಲಾಗಬಹುದು. ಬದಲಾದ ಸನ್ನಿವೇಶಕ್ಕೆ ಶಿಕ್ಷಕನ ಜವಾಬ್ದಾರಿ ಹಾಗೂ ಪಾತ್ರ ಬದಲಾಗಬಹುದೇ ಹೊರತು, ಶಿಕ್ಷಕನಿಲ್ಲದೆ ಪರಿವರ್ತನೆಯನ್ನು ತರುವುದು ಅಸಾಧ್ಯದ ಮಾತು. ಹೀಗಾಗಿ ಶಿಕ್ಷಕನಾದವನು ಹಿಂದೆ, ಇಂದು, ಮುಂದೆ ಹಾಗೂ ಎಂದೆಂದಿಗೂ ಪೂಜ್ಯನೇ ಆಗಿ ಉಳಿಯುತ್ತಾನೆ.

ವಿವೇಕಾನಂದ ಕವಿತಾಂಜಲಿ

## ಮತ್ತೊಮ್ಮೆ ಮೂಡಿ ಬಾ



**ಘೋರ್ಗರೆವ ಕಡಲಿನೊಡಲಿಗೆ ಧುಮುಕಿ**
**ತೆರೆಗಳ ಸೀಳಿ, ನಡುಗುಡ್ಡೆಯಲಿ ನಿಂತು**
**ಭಾರತದ ಕನಸ ಕಂಡವ ನೀನು. ನಿನ್ನ**
**ವರ್ಷಕಾಲ ರುದ್ರ – ರಮಣೀಯ ಛಂದೋಗತಿಗೆ**
**ಮೂಕವಾಗಿದೆ ಲೋಕ ! ಘೋರೆಂದು ಮಳೆ ಹೊಯ್ದು,**
**ಹೊಳೆ – ಹಳ್ಳಗಳಲಿ ನೊರೆಗರೆದು, ಹೊಲ – ಗದ್ದೆ**
**ಗಳಲ್ಲಿ ಸೊಂಪಾಗಿ ಹಸುರು ತಾಗಿದ ಹಾಗೆ**
**ನಿನ್ನ ಮಾತಿನ ರೀತಿ. ನುಡಿದ ನುಡಿಯೊಂ–**
**ದೊಂದೂ ಸಿಡಿಲ ಕಿಡಿ ; ನಡೆ, ಪೌರುಷದ**
**ತೇರು ಹರಿದಂತೆ. ನಮ್ಮ ಇಂದಿನ ಬದುಕೊ,**
**ವಿವೇಕ – ಆನಂದ ಎರಡೂ ಇರದ ಕುಹಕದ**
**ಸಂತೆ. ಮತ್ತೊಮ್ಮೆ ಮೂಡಿ ಬಾ, ದಿವ್ಯ ನಿರ್ಭಯ**
**ಧೀರ ಗುರುಮೂರ್ತಿ. ಬೇಕಾಗಿದೆಯಯ್ಯ, ನಮ್ಮ**
**ಈ ಸತ್ತ ದೇಶಕ್ಕೆ ನಿನ್ನ ಸಾತ್ವಿಕ ಸ್ಫೂರ್ತಿ.**

*–ಡಾ. ಜಿ.ಎಸ್. ಶಿವರುದ್ರಪ್ಪ*

## ಮಗುವಿನ ಹೃದಯ ಅರಿತ

# ಮರಿಯಾ ಮಾಂಟೆಸರಿ

**ಡಾ. ಎಚ್. ಪಾಂಡುರಂಗ ವಿಠಲ**

ಇಟಲಿ ಏಕೀಕರಣಗೊಂಡು ಸಂಯುಕ್ತ ರಾಷ್ಟ್ರವಾದ ಹೊಸತರಲ್ಲಿ ಹುಟ್ಟಿದವರು (೧೮೭೦) ಮರಿಯಾ ಮಾಂಟೆಸರಿ. ಮೊದಲು ಗಣಿತದಲ್ಲಿ ಆಸಕ್ತಿ ತೋರಿದ ಇವರು ಅನಂತರ ಜೀವಶಾಸ್ತ್ರದೆಡೆಗೆ, ಆ ಮೂಲಕ ವೈದ್ಯಕೀಯದತ್ತ ಆಕರ್ಷಿತರಾದರು. ಕಡೆಗೆ, ವೈದ್ಯ ಪದವಿ ಗಳಿಸಿದ ಇಟಲಿ ದೇಶದ ಪ್ರಪ್ರಥಮ ಮಹಿಳೆ ಎನಿಸಿದರು.

ಒಮ್ಮೆ, ಸಹಪಾಠಿಗಳ ಕೀಟಲೆ, ಪೋಷಕರ ಅಸಹಕಾರಗಳಿಂದ ಬೇಸತ್ತ ಮರಿಯಾ ಒಂದು ನಿರ್ಜನ ಉದ್ಯಾನವನಕ್ಕೆ ಬಂದು ಕುಳಿತಾಗ, ಭಿಕ್ಷೆ ಬೇಡುತ್ತಿದ್ದ ಒಬ್ಬ ಮಹಿಳೆಯ ಮಗು, ತನ್ನಷ್ಟಕ್ಕೆ ತಾನು ಉಲ್ಲಾಸದಿಂದ ಬಣ್ಣದ ಕಾಗದದೊಡನೆ ಆಡುತ್ತಿದ್ದುದನ್ನು ಗಮನಿಸಿದರು. ಇದರಿಂದ ಮಕ್ಕಳ ಪ್ರಪಂಚವೇ ಬೇರೆ ಎಂಬುದನ್ನು ಅರಿತುಕೊಂಡರು. ಇದೇ ಅವರಿಗೊಂದು ವಿಶಿಷ್ಟ ಅನುಭವವಾಗಿ, ಮುಂದೆ ಈ ಮಕ್ಕಳ ಪ್ರಪಂಚದ ಅದ್ಭುತಗಳನ್ನು ಸಂಶೋಧಿಸುವ ಮಹತ್ಕಾರ್ಯಕ್ಕೆ ಪ್ರೇರಣೆ ನೀಡಿತು.



ವೈದ್ಯಕೀಯ ಪದವಿ ಪಡೆದ ಅನಂತರ ಮರಿಯಾರನ್ನು ಮಾನಸಿಕ ಚಿಕಿತ್ಸಾ ವಿಭಾಗದಲ್ಲಿ ನೇಮಿಸಲಾಯಿತು. ವಿವಿಧ ಮಾನಸಿಕ ಕೇಂದ್ರಗಳಿಗೆ ಭೇಟಿ ನೀಡುವಾಗ ಬುದ್ಧಿಮಾಂದ್ಯ ಅನಾಥ ಮಕ್ಕಳ ಬಗ್ಗೆ ಆಕೆ ಅಪಾರ ಆಸಕ್ತಿ ವಹಿಸಿದರು. ಇಂತಹ ಮಕ್ಕಳನ್ನು ಬಂಧಿಗಳನ್ನಾಗಿ ಮಾಡಿ, ಕೂಡಿ ಹಾಕುವ ಕ್ರಮ ಇತ್ತು. ಇದಕ್ಕೆ ಕಾರಣ, 'ಚೆನ್ನಾಗಿ ತಿಂದ ಮೇಲೂ ಮೂಳೆ ಚೂರುಗಳಿಗಾಗಿ ಹುಡುಕುತ್ತಾರೆ' ಎಂಬ ದೂರು. ಆಟಿಕೆಗಳಿಲ್ಲದ ಪರಿಸರದಲ್ಲಿ, ಕೈಯಿಂದ ಮುಟ್ಟಿ ಆಡುವ ವಸ್ತುಗಳನ್ನು ಬಯಸಿ, ಈ ಮಕ್ಕಳು ಹೀಗೆ ಮಾಡುತ್ತಾರೆ ಎಂಬುದನ್ನು ಮಾಂಟೆಸರಿ ಅರಿತುಕೊಂಡರು. ಮಾನಸಿಕ ವಿಕಾಸವೆಂಬುದು ಆ ಮಕ್ಕಳು ತಮ್ಮ ಕೈಯಾರೆ ಮಾಡುವ ಚಟುವಟಿಕೆಯಲ್ಲಿದೆ ಎಂಬುದನ್ನು ಅವರು ಬೇಗ ಗುರುತಿಸಿಕೊಂಡರು. ಇಂಥ ಸ್ವತಂತ್ರ ಚಟುವಟಿಕೆಗೆ ಅವಕಾಶವಿಲ್ಲದ ಶೈಕ್ಷಣಿಕ ನ್ಯೂನತೆಯೇ ಬುದ್ಧಿಮಾಂದ್ಯತೆಗೆ ಕಾರಣ. ವೈಯಕ್ತಿಕ ಸ್ವಾತಂತ್ರ್ಯ ನೀಡಿ, ಆತ್ಮಗೌರವ ಹೆಚ್ಚಿಸಿದರೆ, ಈ ಮಕ್ಕಳನ್ನೂ ಸಾಮಾನ್ಯ ನಾಗರಿಕರನ್ನಾಗಿಸಬಹುದು ಎಂಬುದು ಮರಿಯಾ ಅವರ ಅಭಿಪ್ರಾಯವಾಗಿತ್ತು. ಆದರೆ ಅಂಥವರಿಗೆ ಬೇರೆ ಮಕ್ಕಳಿಗಿಂತ ಹೆಚ್ಚು ಸೌಲಭ್ಯಗಳನ್ನು ಒದಗಿಸಬೇಕು, ಅಷ್ಟೆ.

ಸರಕಾರವು ಓದಿನಲ್ಲಿ ಹಿಂದುಳಿದವರು ಮತ್ತು ಮಾನಸಿಕ ನ್ಯೂನತೆಯುಳ್ಳವರಿಗಾಗಿಯೇ ಪ್ರತ್ಯೇಕ ಶಾಲೆಯನ್ನು ಸ್ಥಾಪಿಸಿತು; ಮಾಂಟೆಸರಿಯವರನ್ನೇ ಅದಕ್ಕೆ ಮಾರ್ಗದರ್ಶಕಿಯನ್ನಾಗಿ ನೇಮಿಸಿತು. ೧೮೯೦ರಿಂದ ೧೯೦೧ರವರೆಗೂ ಅವರು ಈ ಶಾಲೆಯ ಮಕ್ಕಳ ಜೊತೆಗಿದ್ದರು. ಆ ಮಕ್ಕಳ ನಡವಳಿಕೆ, ಮಾತು, ಚಲನವಲನಗಳನ್ನು ಗಮನಿಸಿದರು; ಇವರಿಗಾಗಿ ಪಠ್ಯಕ್ರಮ, ಅಧ್ಯಯನ ಸಾಮಗ್ರಿಗಳನ್ನು ತಯಾರಿಸಿದರು; ಅವರಲ್ಲಿ ಆಮೂಲಾಗ್ರ ಪರಿವರ್ತನೆಯನ್ನು ತಂದರು. ಈ ಬುದ್ಧಿಮಾಂದ್ಯ ವಿದ್ಯಾರ್ಥಿಗಳು ಸಾಮಾನ್ಯ ಮಕ್ಕಳೊಡನೆ ಪಬ್ಲಿಕ್ ಪರೀಕ್ಷೆಯಲ್ಲಿ ಸ್ಪರ್ಧಿಸಿ ಉತ್ತೀರ್ಣರಾದದ್ದು ಒಂದು ಅದ್ಭುತ ಸಾಧನೆಯೇ ಸರಿ! ಆಗ ಈ ಹೊಸ ಶಿಕ್ಷಣಕ್ರಮದ ಬಗ್ಗೆ ಎಲ್ಲರೂ ಕುತೂಹಲಗೊಂಡರು. ಮರಿಯಾ ಮಾಂಟೆಸರಿ ಈ ನೂತನ ವಿಧಾನದ ಬಗ್ಗೆ ವಿವಿಧೆಡೆ ಉಪನ್ಯಾಸ ನೀಡಿದರು. ೧೯೦೪ರಲ್ಲಿ ಮಾನವಶಾಸ್ತ್ರ ಪ್ರಾಧ್ಯಾಪಕರಾದರು. ಆಗ 'ಕಲಿಕೆಯ ಮಾನವಶಾಸ್ತ್ರ' ಎಂಬ ಬೃಹತ್‌ಗ್ರಂಥ ರಚಿಸಿ ವಿಖ್ಯಾತರಾದರು. ವೈದ್ಯರಾಗಿಯೂ ಮರಿಯಾ ಬಹಳ ಜನಪ್ರಿಯರಾಗಿದ್ದರು.

**ಸಣ್ಣ ಮಕ್ಕಳು ತಮಗೆ ತಾವೇ ಕಲಿಯುತ್ತಾರೆ. ಸೃಜನಾತ್ಮಕ ಅಭಿವ್ಯಕ್ತಿ ಅವರಲ್ಲಿ ತಾನೇ ತಾನಾಗಿ ಮೂಡುತ್ತದೆ. ಇದನ್ನು ಕಂಡುಹಿಡಿದು, ಮಕ್ಕಳ ಬೋಧನಾಕ್ರಮದಲ್ಲಿ ಗುಣಾತ್ಮಕ ಕ್ರಾಂತಿಯನ್ನು ಉಂಟುಮಾಡಿದವರು ಮರಿಯಾ ಮಾಂಟೆಸರಿ. ಇವರ ಜೀವನ, ಸಾಧನೆ ಮತ್ತು ಸಂಶೋಧನೆಗಳನ್ನು ಸರಳವಾಗಿ ವಿವರಿಸುವ ಈ ಲೇಖನವನ್ನು ರಚಿಸಿದ ಲೇಖಕರು ಮೈಸೂರಿನ ಗೋಪಾಲಸ್ವಾಮಿ ಶಿಶುವಿಹಾರ ಸಂಸ್ಥೆಯ ಪದವಿ ಕಾಲೇಜಿನ ಪ್ರಾಂಶುಪಾಲರಾಗಿದ್ದಾರೆ. ಮೈಸೂರು ಶ್ರೀರಾಮಕೃಷ್ಣ ಆಶ್ರಮದ ಭಕ್ತರಾದ ಇವರ ಹಲವು ಲೇಖನಗಳು ಮತ್ತು ಸಂಕಲನಗಳು 'ವಿವೇಕಪ್ರಭ' ಪತ್ರಿಕೆಯಲ್ಲಿ ಈಗಾಗಲೇ ಪ್ರಕಟವಾಗಿವೆ.**

ತಾವು ನಂಬಿದ್ದ ಸಿದ್ಧಾಂತವನ್ನು ಕಾರ್ಯರೂಪಕ್ಕೆ ತರಲು ಮರಿಯಾ ಮಾಂಟೆಸರಿ ರೋಂ ನಗರದ ಕೊಳಚೆ ಪ್ರದೇಶದಲ್ಲಿ ಒಂದು ಶಾಲೆ ತೆರೆದರು. ಸಾಮಾಜಿಕವಾಗಿ ಹಿಂದುಳಿದವರಿಗಾಗಿ ಇದ್ದ ಈ ಶಾಲೆಯಲ್ಲಿ, ಮಕ್ಕಳ ಮನಸ್ಸಿನಾಳದಲ್ಲಿ ಹುದುಗಿದ್ದ ಹಲವಾರು ಸತ್ಯಗಳನ್ನು ಅವರು ಅನ್ವೇಷಿಸಿದರು.

ಆ ಶಾಲೆಯಲ್ಲಿ ಮೂರು ವರ್ಷದ ಮಗು ಮರದ ಗೂಟವೊಂದನ್ನು ಇನ್ನೊಂದು ತುಂಡಿನಲ್ಲಿದ್ದ ತೂತಿನಲ್ಲಿ ಸೇರಿಸಲು, ಸುತ್ತಲಿನ ಪ್ರಪಂಚದ ಅರಿವೇ ಇಲ್ಲದೆ, ಪ್ರಯತ್ನಿ ಸುತ್ತಿತ್ತು. ಆ ಮಗುವನ್ನು ಎತ್ತಿ, ಮೇಜಿನ ಮೇಲೆ ಕೂರಿಸಿ ದರೂ ಅದು ತನ್ನ ಪ್ರಯತ್ನವನ್ನು ಬಿಡಲಿಲ್ಲ. ಸ್ವಲ್ಪ ಸಮಯದ ನಂತರ ಬೇರೆ ಆಟವಾಡಿ, ಪುನಃ ಮೊದಲಿನ ಪ್ರಯತ್ನಕ್ಕೇ ಹಿಂದಿರುಗಿತು. ನಲವತ್ತೆರಡು ಬಾರಿ ಪ್ರಯತ್ನಿಸಿದರೂ ಆ ಮಗುವಿನಲ್ಲಿ ಸುಸ್ತಾಗಲಿ, ಬೇಸರವಾಗಲಿ ಕಾಣಬರಲಿಲ್ಲ. ಆಸಕ್ತಿ ಇರುವ ವಿಷಯದಲ್ಲಿ ಮಗು ಎಷ್ಟುಬಾರಿಯಾದರೂ ಪ್ರಯತ್ನಿಸುತ್ತದೆ ಹಾಗೂ ಅತಿ ಹೆಚ್ಚಿನ ಏಕಾಗ್ರತೆಯಿಂದ ಸ್ಪಂದಿ ಸುತ್ತದೆ ಎನ್ನುವುದು ಇದರಿಂದ ತಿಳಿದುಬಂತು. ಮುಂದೆ, ಮಾಂಟೆಸರಿಯವರ ಶಿಕ್ಷಣಪದ್ಧತಿಯಲ್ಲಿ **'ಕಲಿಕೆಯಲ್ಲಿ ಸ್ವಾತಂತ್ರ್ಯ'** ಹಾಗೂ **'ಪುನರಾವರ್ತನೆಯ ಮಹತ್ವ'** – ಇವೇ ಪ್ರಮುಖ ವಿಧಾನಗಳಾಗಿದ್ದನ್ನು ನಾವು ಗಮನಿಸಬಹುದು.

ಈ ವಿಧಾನದಲ್ಲಿ ಶಿಕ್ಷಕಿಯು ಮಕ್ಕಳಿಗೆ ಆಟದ ಸಾಮಾನು ಕೊಡುವುದಿಲ್ಲ. ಮಕ್ಕಳೇ ತಮಗೆ ಬೇಕಾದ ಆಟದ ಸಾಮಾನನ್ನು ತೆಗೆದುಕೊಂಡು ಅದೇ ಜಾಗದಲ್ಲಿ ಇಡುತ್ತಾರೆ. ಹೀಗೆ ತಮಗೇ ಅರಿವಿಲ್ಲದ ಹಾಗೆ ಅವರಲ್ಲಿ ಒಂದು ಶಿಸ್ತು, ಕ್ರಮಬದ್ಧತೆ ಬರುತ್ತದೆ. ಮಕ್ಕಳು ತಮ್ಮ ಹಿಂದಿನ ಜ್ಞಾನದಿಂದ ತಮಗೆ ಬೇಕಾದ ಚಟುವಟಿಕೆಗಳನ್ನು ತಾವೇ ಆಯ್ದುಕೊಳ್ಳುತ್ತಾರೆ. ಇದು ಕಲಿಕೆಯಲ್ಲಿನ ಸಂಪೂರ್ಣ ಸ್ವಾತಂತ್ರ್ಯದೆಡೆಗೆ ಮೊದಲ ಹೆಜ್ಜೆ. ಇಲ್ಲಿ ಯಾವುದೇ ಬಲವಂತ ಇಲ್ಲ. ಸ್ವಂತ ಇಚ್ಛೆಗೇ ಪ್ರಾಶಸ್ತ್ಯ. ಕಲಿಕೆಯಲ್ಲಿ ಪ್ರತಿಫಲ, ಶಿಕ್ಷೆಗಳ ನಿರ್ದೇಶನವಿಲ್ಲ. ತಪ್ಪಿ ನಡೆಯುವ ಮಕ್ಕಳು ಮಾಂಟೆಸರಿಯವರ ಜೊತೆ ಕೂರಬೇಕಿತ್ತು, ಅಷ್ಟೆ. ಒಂಟಿಯಾಗಲು ಬಯಸದ ಮಕ್ಕಳು ತಮ್ಮ ತಪ್ಪನ್ನು ತಿದ್ದಿಕೊಳ್ಳುತ್ತಿದ್ದರು. ಈ ವಿಧಾನದಲ್ಲಿ, 'ಮಕ್ಕಳು ನಿಶ್ಶಬ್ದತೆಯನ್ನು ಇಷ್ಟಪಡುತ್ತಾರೆ, ಸ್ವಂತ ಚಟುವಟಿಕೆಗಳಿಂದ ಆತ್ಮವಿಶ್ವಾಸ ಗಳಿಸುತ್ತಾರೆ' ಎಂಬ ವಿಶಿಷ್ಟ ಅಂಶ ತಿಳಿದುಬಂತು.

ಯಾರೂ ಕಲಿಸದೆ ಬರವಣಿಗೆ ಕಲಿತದ್ದು, ಈ ಮಕ್ಕಳ ವಿಶೇಷ. ಅಕ್ಷರದ ಪರಿಚಯ ಮಾಡಿಸದೆ, ಅದರಿಂದ ಆರಂಭವಾಗುವ ಪದಗಳನ್ನು ಮಕ್ಕಳಿಗೆ ತಿಳಿಸಲಾಯಿತು. ಅಕ್ಷರಗಳ ತುಂಡುಗಳು ಹಾಗೂ ಸ್ಪರ್ಶ ಚೆನ್ನಾಗಿ ಆಗುವಂತೆ ಮರಳು ಕಾಗದದಲ್ಲಿ ಕೊರೆದು ಮರದ ತುಂಡಿನ ಮೇಲೆ ಅಂಟಿ ಸಿದ ಅಕ್ಷರಗಳನ್ನು ಮಕ್ಕಳ ಕೈಯಲ್ಲಿ ಮುಟ್ಟಿಸಿ, ಅಕ್ಷರಗಳನ್ನು ಮಕ್ಕಳಿಗೆ ಪರಿಚಯಿಸಲಾಯಿತು. ಆಶ್ಚರ್ಯವೆಂದರೆ, ತಾವು ಮಾಡುತ್ತಿದ್ದ ಉಚ್ಚಾರಣೆಗೆ ಅನುಗುಣವಾಗಿ ಅಕ್ಷರ ಜೋಡಿಸಲು ಮಕ್ಕಳು ತಾವೇ ತಾವಾಗಿ ಕಲಿತರು! ಚಿತ್ರ ಅನುಕರಿಸಿ ಚಿತ್ರ ಬರೆಯುವಂತೆ, ಹಲವರು ಅಕ್ಷರವನ್ನೂ ಬರೆಯಲು ಕಲಿತು, ಸಣ್ಣ ಸಣ್ಣ ಪದಗಳನ್ನು ಕೂಡ ಬರೆದರು! ಮೊದಲ ಪದ ಕಲಿತ ಒಬ್ಬ ಮಗುವಿನ ಉತ್ಸಾಹ ಎಷ್ಟಿತ್ತೆಂದರೆ, ನೆಲದ ಮೇಲೆಲ್ಲ ಗೀಚುವುದರ ಮೂಲಕ ಅದು ಅಭಿವ್ಯಕ್ತಗೊಂಡಿತ್ತು! ಓದುವಿಕೆಯನ್ನೂ ಮಕ್ಕಳು ಹೀಗೆಯೇ ಕ್ರಮೇಣ ಕಲಿತರು. ಒಂದು ದಿನ ಮಾಂಟೆಸರಿಯು, ಹುಡುಗರು ಏನು ಮಾಡು ತ್ತಾರೋ ನೋಡೋಣವೆಂದು, 'ನನ್ನನ್ನು ಪ್ರೀತಿಸುವುದಾದರೆ ನನಗೊಂದು ಮುತ್ತು ಕೊಡು', 'ಓದಬಲ್ಲೆಯಾದರೆ ಹತ್ತಿರ ಬಾ' ಎಂದು ಕಪ್ಪುಹಲಗೆಯ ಮೇಲೆ, ದಿನದ ಪ್ರಾರಂಭದಲ್ಲಿ ಬರೆಯಲಾರಂಭಿಸಿದರು. ಎರಡು ದಿನ ತಮ್ಮ ಚಟುವಟಿಕೆ ಗಳಲ್ಲಿಯೇ ಮಗ್ನರಾಗಿದ್ದ ಮಕ್ಕಳು, ತಮ್ಮ ಪ್ರಿಯ ಶಿಕ್ಷಕಿಯೂ ಅದೇ ರೀತಿ ತನ್ನ ಸಂತೋಷಕ್ಕಾಗಿ, ಏನೋ ಬರೆದುಕೊಳ್ಳು ತ್ತಿದ್ದಾಳೆ ಎಂದು ಭಾವಿಸಿಕೊಂಡಿದ್ದರು. ಆದರೆ, ಮೂರನೇ ದಿನ, ಮಾತೇ ಆಡದ ಸಂವಹನ ಸಾಧ್ಯವಾಯಿತು. ಒಬ್ಬಳು ಚಿಕ್ಕ ಹುಡುಗಿ ನಾಚಿಕೆಯಿಂದ ಮಾಂಟೆಸರಿಯವರ ಬಳಿ ಬಂದು ನಿಂತು ಅವರಿಗೆ ಮುತ್ತಿಕ್ಕಿಯೇಬಿಟ್ಟಳು!

ಕ್ರಮೇಣ ಇತರ ದೇಶಗಳಲ್ಲೂ ಈ ಶಿಕ್ಷಣಕ್ರಮ ಹರಡಿತು. ಇದರ ಬಗ್ಗೆ ಮರಿಯಾ ಮಾಂಟೆಸರಿ ಅನೇಕ ಪುಸ್ತಕಗಳನ್ನು ಬರೆದು, ಅವೂ ಜನಪ್ರಿಯವಾದುವು. ಮಾಂಟೆಸರಿ ಎರಡನೇ ವಿಶ್ವಯುದ್ಧದ ಸಮಯದಲ್ಲಿ ಭಾರತದ ಚೆನ್ನೈ ನಗರದ ಅಡ್ಯಾರ್‌ನಲ್ಲಿ ತಮ್ಮ ಶಿಕ್ಷಣಕ್ರಮದ ತರಬೇತಿ ನಡೆಸುತ್ತಿದ್ದರು. ಅವರು ಬ್ರಿಟಿಷರ ಶತ್ರುದೇಶವಾದ ಇಟಲಿಯವರಾದರೂ, ಯಾವ ತನಿಖೆ–ವಿಚಾರಣೆಗೂ ಒಳಪಡದೆ, ತಮ್ಮ ಕೆಲಸ ಮುಂದುವರೆಸಲು ಅವಕಾಶ ದೊರಕಿಸಿಕೊಂಡದ್ದು ಅವರ ಜ್ಞಾನದ ಹಿರಿಮೆಯೇ ಸರಿ.

ಮರಿಯಾ ಮಾಂಟೆಸರಿಯವರ 'ಮಕ್ಕಳ ಮನೆ' ಮುಂದೆ ಶಿಶುವಿಹಾರದ ಕಲ್ಪನೆಗೆ ಅಡಿಪಾಯವಾಯಿತು. ಮಕ್ಕಳ ಚಟು ವಟಿಕೆಗಳಿಗೆ ಆದರ್ಶ ವಾತಾವರಣ ಅವಶ್ಯಕ ಎನ್ನುವುದೇ ಅವರ ಸಂಶೋಧನೆ. ಇದರಲ್ಲಿ ಅವರು ಕಂಡುಕೊಂಡ ಮುಖ್ಯ ವಾದ ಅಂಶಗಳು ಹೀಗಿವೆ: **೧. ರೂಪಾಂತರ ಹಾಗೂ ಬೆಳವ ಣಿಗೆಯ ಹಂತಗಳು ೨. ಮಕ್ಕಳ ಕಲಿಕೆಯಲ್ಲಿ ಹಿರಿಯರ ಮಾನಸಿಕ ಪರಿವರ್ತನೆಯ ಮಹತ್ವ ೩. ವಯಸ್ಕರು ಬದಲಾಗುವುದಿಲ್ಲ, ಮಕ್ಕಳು ಬದಲಾಗುತ್ತಾರೆ ಎಂಬ ಅಂಶ.**

**೧. ರೂಪಾಂತರ ಹಾಗೂ ಬೆಳವಣಿಗೆಯ ಹಂತಗಳು:** ಮಗು ನಡೆಯುವುದನ್ನು ಹೇಗೆ ಕಲಿಯುತ್ತದೆ ಎನ್ನುವುದನ್ನು ಗಮನಿಸಿ. ಅದು ಮೊದಲು ನಿಲ್ಲುತ್ತದೆ. ಅನಂತರ ಇತರ ವಸ್ತುಗಳನ್ನು ಆಧರಿಸಿ, ಸರ್ಕಸ್ ಮಾಡುತ್ತ, ಹೆಜ್ಜೆ ಇಡಲು ಪ್ರಯತ್ನಿಸುತ್ತದೆ. ತನಗೆ ತಾನೇ ಸಮತೋಲನ ಮತ್ತು ಚಲನೆ ಯನ್ನು ಅಭ್ಯಾಸ ಮಾಡಿಕೊಳ್ಳುತ್ತದೆ.

ಮಕ್ಕಳ ಬೆಳವಣಿಗೆಯನ್ನು ಆರು ವರ್ಷಗಳ ಕಾಲದ ಮೂರು ಅವಧಿಗಳನ್ನಾಗಿ ಅಧ್ಯಯನ ಮಾಡಬಹುದು. ಮೊದಲ ಆರು ವರ್ಷಗಳಲ್ಲಿ ಎರಡು ಘಟ್ಟಗಳು: **೧. ಮಕ್ಕಳ**

**ಸುಪ್ತ ಮನಸ್ಸು ಎಲ್ಲವನ್ನೂ ತಾನೇ ಎಂದು ಭಾವಿಸುವ ಮೊದಲ ಮೂರು ವರ್ಷಗಳು. ೨. ತಾನು ಏನು ಮಾಡುತ್ತಿದ್ದೇನೆಂಬ ಎಚ್ಚರವುಳ್ಳ, ಜಾಗೃತ ಮನಸ್ಸನ್ನು ಬೆಳೆಸಿಕೊಳ್ಳುವ ಇಚ್ಛೆಯನ್ನು ತೋರುವ ೩ ರಿಂದ ೬ ವರ್ಷಗಳ ಅವಧಿ.** ಇದನ್ನು 'ಸೃಷ್ಟ್ಯಾತ್ಮಕ ಕಾಲ' ಎಂದು ಕರೆಯುತ್ತಾರೆ. ವಯಸ್ಕರಂತೆ ಮನಸ್ಸು, ಬುದ್ಧಿಗಳಿಂದ ವಿಷಯಗಳನ್ನು ಗ್ರಹಿಸದೆ, ಮಕ್ಕಳು ಪರಿಸರ ಹಾಗೂ ಜೀವನದಿಂದಲೇ ಗ್ರಹಿಸುತ್ತಾರೆ. ಇದು ಮಕ್ಕಳ ಕಲಿಕೆಯಲ್ಲಿನ ಒಂದು ವಿಶಿಷ್ಟ ಅಂಶ. ಮಾಂಟೆಸರಿ ಇದನ್ನು, ಫೋಟೋಗ್ರಫಿಯಲ್ಲಿ ತೆಗೆದ ಚಿತ್ರವನ್ನು ಕತ್ತಲ ಕೋಣೆಯಲ್ಲಿ ಪರಿಷ್ಕರಿಸಿ, ರೂಪಕೊಡುವುದಕ್ಕೆ ಹೋಲಿಸುತ್ತಾರೆ. ತಾನು ಅನುಭವಿಸಿದ ವಿಷಯಗಳೆಲ್ಲವನ್ನೂ ಮಗು ಸುಪ್ತಾವಸ್ಥೆಯಲ್ಲಿ ಇಟ್ಟಿರುತ್ತದೆ. ಹಾಗೆಯೇ, ಬೆಳೆಯುತ್ತ ಅದನ್ನು, ಜಾಗ್ರತಾವಸ್ಥೆಗೆ ತಂದು ಸ್ಥಿರಗೊಳಿಸಿಕೊಳ್ಳುತ್ತದೆ. ಮೊದಲ ಆರು ತಿಂಗಳಲ್ಲಿ ಮಗುವಿನಲ್ಲಿ ಮಾನಸಿಕ ಚಟುವಟಿಕೆ ಇರುವುದಿಲ್ಲ ಎಂಬ ಅನಿಸಿಕೆ ತಪ್ಪು. ಮಗು ತನ್ನ ಅಂಗಾಂಗಗಳ ಚಲನೆಯ ಮೂಲಕವೇ ಗ್ರಹಿಸುತ್ತದೆ. ಮಿದುಳಿನ ಉಪಕರಣವಾದ ತನ್ನ ಹಸ್ತಗಳ ಅನುಭವದಿಂದ ಅರಿಯುತ್ತದೆ. ಆಟವಾಡುತ್ತಲೇ, ಆಟಿಕೆಗಳಿಂದ ಕಟ್ಟಡ ಇತ್ಯಾದಿಗಳನ್ನು ನಿರ್ಮಿಸುತ್ತಲೇ, ಸುತ್ತಲ ಜಗತ್ತಿನ ಅರಿವನ್ನು ರೂಪಿಸಿಕೊಳ್ಳುತ್ತದೆ. ಒಟ್ಟಾರೆ, ಪ್ರಪಂಚವನ್ನು ಹೀಗೆ ಸುಪ್ತಾವಸ್ಥೆಯಲ್ಲಿ ಅರಿಯುವ ಮಗುವಿನ ಈ ಚಿತ್ರಣವನ್ನು ನೀಡಿದ್ದು ಮರಿಯಾ ಮಾಂಟೆಸೆರಿಯವರ ಅದ್ಭುತ ಸಂಶೋಧನೆಯಾಗಿದೆ. ಈ ಅರಿಯುವ ಪ್ರಕ್ರಿಯೆಯಲ್ಲಿ ಹಿರಿಯರು ಸಹಾಯ ಮಾಡಬಾರದು, ಮಗುವನ್ನು ಮುಟ್ಟಲೂಬಾರದು. ಯಾವ ಮಧ್ಯಪ್ರವೇಶವೂ ಇದರಲ್ಲಿ ಅನಗತ್ಯ. ಸ್ವತಂತ್ರವಾಗಿ ಚಟುವಟಿಕೆ ನಡೆಸಲು 'ಮಕ್ಕಳ ಮನೆ'ಯಂತಹ ಅನುಕೂಲಕರ ಪರಿಸರ ನೀಡುವುದಷ್ಟೇ ವಯಸ್ಕರ ಕೆಲಸ. ಆಗ ಮಾತ್ರ, ವೈಯಕ್ತಿಕ ಗುಣಗಳನ್ನು, ಪ್ರತ್ಯೇಕ ಅಸ್ತಿತ್ವವನ್ನು ಮಗು ರೂಪಿಸಿಕೊಳ್ಳಬಹುದು. ಇದು ಮರಿಯಾ ಮಾಂಟೆಸರಿ ಕಂಡುಕೊಂಡ ಸತ್ಯ.

೬ರಿಂದ ೧೨ ವರ್ಷದವರೆಗಿನ ೨ನೆಯ ಹಂತವೆನ್ನುವುದು, ಹೊಸ ಹಲ್ಲುಗಳು ಮೂಡಿ, ದುಂಡನೆಯ ಕೈಕಾಲುಗಳಲ್ಲಿ ಮೂಳೆಗಳು ಬೆಳೆದು, ಮಗುವು ತನ್ನ ಸ್ವಪ್ರಜ್ಞೆಯನ್ನು, ಮಾನಸಿಕ ಕಾರ್ಯಸಾಮರ್ಥ್ಯವನ್ನು ಬೆಳೆಸಿಕೊಳ್ಳುವ ಸಮೃದ್ಧಿಯ ಅವಧಿ. ಗುಂಪುಗಳಾಗಿ ಪ್ರತ್ಯೇಕತೆಯ ಭಾವನೆಯನ್ನು ಬೆಳೆಸಿಕೊಳ್ಳುವುದು ಅಥವಾ 'ಗುಂಪು ಪ್ರವೃತ್ತಿ', ಸ್ಪಷ್ಟ ನಿಲುವಿನ ಆಸಕ್ತಿಗಳು, ಇತರರ ಒಡನಾಟದಲ್ಲಿ ಆನಂದ, ಬೇರೆ ಗುಂಪಿನವರ ಬಗ್ಗೆ ತಲೆ ಕೆಡಿಸಿಕೊಳ್ಳದಿರುವುದು – ಈ ಅವಧಿಯ ಲಕ್ಷಣಗಳು. ಈ ಹಂತದ ಮಕ್ಕಳನ್ನು ನಿಯಂತ್ರಿಸಿ, ಅವರಲ್ಲಿ ಸಾಮಾಜಿಕ ಮತ್ತು ನೈತಿಕ ಗುಣಗಳನ್ನು ಮೂಡಿಸಬೇಕು. ಏಕೆಂದರೆ, ಇವರಲ್ಲಿ ತಾರ್ಕಿಕ ಸಂವೇದನೆ ಬೆಳೆದು, ಸರಿ–ತಪ್ಪುಗಳ ತೀರ್ಮಾನದಲ್ಲಿ ವ್ಯಕ್ತವಾಗುವುದು ಈ ಕಾಲಘಟ್ಟದಲ್ಲಿಯೇ. ಈ ಹಂತದಲ್ಲಿ ತನ್ನ ಪ್ರವೃತ್ತಿಗಳಿಗೆ ಹೇಗೆ ಪ್ರತಿಕ್ರಿಯಿಸಬೇಕೆನ್ನುವ ಯೋಚನೆ ಈಗಾಗಲೇ ಮಗುವಿಗೆ ಬಂದಿರುತ್ತದೆ. ಇದೇ ರೀತಿ, ಪ್ರತಿ ಹಂತದಲ್ಲಿಯೂ ಬೇರೆ ಬೇರೆ ಶಿಕ್ಷಣ ವಿಧಾನಗಳನ್ನು ಬಳಸಿ ಯಶಸ್ಸು ಪಡೆಯಬೇಕೆನ್ನುವುದೇ ಮಾಂಟೆಸರಿ ಶಿಕ್ಷಣದ ಧ್ಯೇಯ.

**೩. ೧೨ ರಿಂದ ೧೮ ವರ್ಷಗಳ ಮೂರನೆಯ ಹಂತವೆನ್ನುವುದು ಹರೆಯ ಅಥವಾ ಯೌವನದ ಅವಧಿ.** ಇದು ಅನೇಕ ರೀತಿಯ ದೈಹಿಕ ಬದಲಾವಣೆಗಳ, ಹೊಸ ಮಾನಸಿಕ ಗುಣಗಳ ಬೆಳವಣಿಗೆಯ ಕಾಲ. ಅನುಮಾನ, ಸಂಶಯ, ಸಂಕೋಚ, ಹಿಂಸೆಯ ಪ್ರವೃತ್ತಿ, ನಿರುತ್ಸಾಹ, ಕುಂಠಿತ ಬುದ್ಧಿ, ಅಂತರ್ಮುಖತ್ವ, ಸಿಡಿದೇಳುವ ಸಂಘರ್ಷದ ಮನಃಸ್ಥಿತಿ, ಸೃಜನಶೀಲತೆಯಲ್ಲಿ ಆಸಕ್ತಿ, ಆರ್ಥಿಕ ಸ್ವಾತಂತ್ರ್ಯದ ಹಂಬಲ, ನಿರೀಕ್ಷಣೆಯ ಸ್ಥಿತಿ – ಇವೆಲ್ಲವೂ ಒಬ್ಬ ವ್ಯಕ್ತಿಯಲ್ಲಿ ಸ್ಪಷ್ಟವಾಗಿ ಕಾಣಬರುವ ಅವಧಿ ಇದು. ಈ ಹಂತದಲ್ಲಿ, ತನ್ನ ಇಚ್ಛೆಯನ್ನೂ ಮೀರಿ ಸೃಷ್ಟಿಯ ನಿಗೂಢತೆಯ ಪರಿಜ್ಞಾನ ಮಗುವಿನ ಮನಸ್ಸಿನಲ್ಲಿ ಬೆಳೆಯುತ್ತದೆ. ಮಾಂಟೆಸರಿಯವರು ಇದನ್ನು, 'ಸಾಮಾಜಿಕ ಪ್ರಜ್ಞೆಯುಳ್ಳ ವ್ಯಕ್ತಿಯ ನಿರ್ಮಾಣ' ಎನ್ನುತ್ತಾರೆ. ಸಮಾಜ ಜೀವನಕ್ಕೆ ಯೋಗ್ಯವಾಗುವ ಅರ್ಹತೆಗಳು ಬೆಳೆಯುವಂತೆ ಈ ಹಂತದ ಮಗುವನ್ನು ತಿದ್ದಬೇಕು. ಒಂಟಿಯಾಗಿ, ಅವಮಾನಿತನಾಗಿ, ವಿಕೃತಿಗಳೊಡನೆ ಅವನು ಸಮಾಜವನ್ನು ಪ್ರವೇಶಿಸದಂತೆ ನೋಡಿಕೊಳ್ಳಬೇಕು. ಹೊಂದಾಣಿಕೆಯ ಸ್ವಭಾವ, ಪೋಷಿಸುವ ಶಕ್ತಿ, ತನಗೆ ತಾನೇ ಸಾಮರ್ಥ್ಯದಿಂದ ಬೆಳೆಸಿಕೊಂಡ ಆತ್ಮವಿಶ್ವಾಸಗಳೊಡನೆ ಎದೆಯುಬ್ಬಿ, ತಲೆಯೆತ್ತಿ ಸಮಾಜವನ್ನು ಅವನು ಪ್ರವೇಶಿಸುವಂತಾಗಬೇಕು. ಈ ಅವಧಿಯಲ್ಲಿಯೇ, ದೇವರಲ್ಲಿ ಹಾಗೂ ತನ್ನಲ್ಲಿ ಮಗುವಿಗೆ ಶ್ರದ್ಧೆ, ವಿಶ್ವಾಸಗಳು ಮಗುವಿನಲ್ಲಿ ಮೂಡಬೇಕು.

ಈ ಎಲ್ಲ ಹಂತಗಳಲ್ಲೂ ಬೆಳವಣಿಗೆಯ ಮತ್ತೂ ಸೂಕ್ಷ್ಮ ಅವಧಿಗಳಿವೆ. ಪರಿಸರದ ಆಶ್ರಯದಲ್ಲೇ ಎಲ್ಲ ಬೆಳವಣಿಗೆಯೂ ನಡೆದಿರುತ್ತದೆ. ಆದರೂ ಇಂತಹ ಸೂಕ್ಷ್ಮ ಅವಧಿಗಳಲ್ಲಿ, ಕೆಲವೊಮ್ಮೆ ಹಠಾತ್ ಪ್ರವೃತ್ತಿ ತಲೆದೋರುತ್ತದೆ. ಅದು ಪರಿಸರದ ಕೆಲವು ಅಂಶಗಳನ್ನು ಪರಿಗಣನೆಗೆ ತೆಗೆದುಕೊಳ್ಳುವುದಿಲ್ಲ. ಇದಕ್ಕೆ ಕಾರಣ, ಸುಪ್ತವಾಗಿ ಹುದುಗಿರುವ, 'ಸುಡುವ ಮೋಹಗಳು' (Burning fashions) ಈ ಕಾಲದಲ್ಲಿ ತಲೆಯೆತ್ತುವುದು.

ಮೊಟ್ಟಮೊದಲ ಇಂತಹ ಸೂಕ್ಷ್ಮ ಅವಧಿಯೆಂದರೆ, ಭಾಷಾ ಬೆಳವಣಿಗೆಯದು. ಇಲ್ಲಿ ಕ್ರಮವಿಲ್ಲ, ವಿಧಾನವಿಲ್ಲ, ತಾರ್ಕಿಕ ಜ್ಞಾನವೂ ಕಂಡುಬರುವುದಿಲ್ಲ. ಕೇಳಿದ್ದನ್ನು ಉಚ್ಚರಿಸುವ ಗಿಳಿಪಾಠವಾಗಿಯೇ ಮೊದಲಿಗೆ ಅದು ಕಂಡುಬರುತ್ತದೆ. ಮಗು ಕೆಲಕಾಲ ಹೀಗೆ ಸಂವೇದಿಸಿದರೂ, ಆಮೇಲೆ ರಚನಾತ್ಮಕ ಉದ್ದೇಶವನ್ನು ಬೆಳೆಸಿಕೊಂಡು ಕಲಿಯಲು ಪ್ರಯತ್ನಿಸುತ್ತದೆ. ಭಾಷೆಯ ಬೆಳವಣಿಗೆಯೇ ಮುಂದೆ ಅದರ ವ್ಯಕ್ತಿತ್ವದ ವೈಶಿಷ್ಟ್ಯಕ್ಕೆ ಕಾರಣವಾಗುತ್ತದೆ.

**೨. ಮಕ್ಕಳ ಕಲಿಕೆಯಲ್ಲಿ ಹಿರಿಯರ ಮಾನಸಿಕ ಪರಿವರ್ತನೆಯ ಮಹತ್ವ:** ಮಕ್ಕಳು ಮತ್ತು ವಯಸ್ಕರ ನಡುವಿನ ಸಂಬಂಧದಲ್ಲಿನ ಸಾಮಾಜಿಕ ಸಮಸ್ಯೆಯೇ ಶಿಕ್ಷಣದ ಮೂಲಭೂತ ಸಮಸ್ಯೆ

ಎಂದು ಮಾಂಟೆಸರಿ ಗುರುತಿಸುತ್ತಾರೆ. ಮಕ್ಕಳ ಮನಃಸ್ಥಿತಿಯ ತಪ್ಪುಗ್ರಹಿಕೆಯೇ ವಯಸ್ಕರಲ್ಲಿ ಕಂಡುಬರುವ ಮುಖ್ಯ ದೋಷ. ಮಾಂಟೆಸರಿಯವರ ವಿಚಾರಗಳಿಂದಾಗಿ, 'ಮಕ್ಕಳನ್ನು ಅರಿತು ಕೊಳ್ಳಿ' ಎಂಬ ಸಾಮಾಜಿಕ ಆಂದೋಲನವೇ ಯುರೋಪಿನಲ್ಲಿ ಪ್ರಾರಂಭವಾಯಿತು. ಮಕ್ಕಳ ಮೇಲೆ ಹಿರಿಯರು ದಬ್ಬಾಳಿಕೆ ನಡೆಸುವುದೇ ಘರ್ಷಣೆಯ ಮೂಲ. ಹೀಗಾಗಿ ವಯಸ್ಕ ರಾದವರು ಮಕ್ಕಳನ್ನು ನೋಡುವ ದೃಷ್ಟಿಕೋನವೇ ಬದಲಾಗ ಬೇಕು. ಆರ್ಥಿಕ ಹಾಗೂ ಸಾಮಾಜಿಕ ಮೌಲ್ಯಗಳಿಲ್ಲದ ಅನುತ್ಪಾದಕ ಸದಸ್ಯನೆಂದೂ, ನಿಗದಿತ ಸಾಮಾಜಿಕ ಕಾರ್ಯವಿಲ್ಲದ ಸಮಾಜದ ಒಂದು ಉಪಾಂಗವೆಂದೂ ಮಗುವನ್ನು ಸಾಮಾನ್ಯ ಜನ ತಿಳಿಯುತ್ತಾರೆ. ಕ್ರಮೇಣ ವಯಸ್ಸಾಗುತ್ತಾ, ಮಗುವಿನಲ್ಲಿ ಮೌಲ್ಯವರ್ಧನೆ ಆಗುತ್ತದೆಂದು ಅಂಥವರು ನಂಬುತ್ತಾರೆ. ಇದು ತಪ್ಪು. ಮಗುವನ್ನು ಗೌರವಿಸಬೇಕು. ಮಕ್ಕಳಿಗೆ ನಾವು ಅವರಿಗೆ ಇಷ್ಟವಾದ ಚಟುವಟಿಕೆಗಳನ್ನು ಕೈಗೊಳ್ಳುವ ಸ್ವಾತಂತ್ರ್ಯವನ್ನು ನೀಡಬೇಕು. ಆ ಮೂಲಕ, ತಮ್ಮ ಇಚ್ಛೆಯ ಪ್ರಕಾರ ಜಗತ್ತನ್ನು ಅರ್ಥ ಮಾಡಿಕೊಳ್ಳುವ ಹಕ್ಕನ್ನು ನೀಡಬೇಕು. ಇದಲ್ಲದೆ, ಅದರ ಕಾರ್ಯನಿರ್ವಹಣೆಗೆ ಬೇಕಾದ ಪರಿಸರವನ್ನೂ ಮಗುವಿಗೆ ನಿರ್ಮಿಸಿಕೊಡಬೇಕು. ಇಲ್ಲವಾದರೆ ಹಿರಿಯರು ತಾವೂ ತೊಂದರೆಗೊಳಗಾಗುತ್ತಾರೆ, ಮಗುವನ್ನೂ ಯಾತನೆಗೆ ಒಳಪಡಿಸುತ್ತಾರೆ. ಇಬ್ಬರೂ ಬೇರೆ ಬೇರೆ ಪ್ರಪಂಚದಲ್ಲಿರುವುದ ರಿಂದ ಈ ಸಮಸ್ಯೆ ಉದ್ಭವವಾಗುತ್ತದೆ. ತಮಗೆ ಹಕ್ಕುಗಳಿವೆ ಎಂದು ತಿಳಿಯುವಷ್ಟು ಬುದ್ಧಿ ಮಕ್ಕಳಿಗಿಲ್ಲವಾದರೂ, ತಮ್ಮ ಸಹಜ ಪ್ರವೃತ್ತಿಯಿಂದಲೇ ಕ್ರೌರ್ಯ ಮತ್ತು ದಬ್ಬಾಳಿಕೆಗಳನ್ನು ಅವು ಪ್ರತಿರೋಧಿಸುವುದು ಕಂಡುಬರುತ್ತದೆ. ಈ ಬಗೆಯ ಕ್ರೌರ್ಯಕ್ಕೆ ಹೊಂದಿಕೊಳ್ಳುವ ಸಲುವಾಗಿ, ಅವು ತಮ್ಮ ಅಂತರ್ಗತ ಶಕ್ತಿಗಳನ್ನು ಮುಚ್ಚಿಟ್ಟುಕೊಂಡು, ಬೆಳವಣಿಗೆಯಾಗಬೇಕಾದ ಅಂತರಂಗದ ಸಂಪತ್ತನ್ನು ಹುದುಗಿಸಿಟ್ಟುಕೊಳ್ಳುತ್ತವೆ. ತಮ್ಮ ಆಕಾಂಕ್ಷೆಗಳು ಈಡೇರದಾಗ ಉಂಟಾಗುವ ಒತ್ತಡವು ಅಳು, ಅವಿಧೇಯತೆ, ಸುಳ್ಳು, ಬೆಚ್ಚುವುದು, ಹಾಸಿಗೆಯನ್ನು ಒದ್ದೆ ಮಾಡಿಕೊಳ್ಳುವುದು ಮುಂತಾದ ರೀತಿಗಳಲ್ಲಿ ಪ್ರಕಟವಾಗುತ್ತದೆ.

**೩. ವಯಸ್ಕರು ಬದಲಾಗುವುದಿಲ್ಲ, ಮಕ್ಕಳು ಬದಲಾಗುತ್ತಾರೆ:** ಶಿಕ್ಷಣವು ಮಕ್ಕಳಲ್ಲಿ ಸುಧಾರಣೆ ತರಲು ವಿಫಲವಾದಾಗ, ಉಂಟಾಗುವ ಮಾನಸಿಕ ಗಾಯವು ದೊಡ್ಡವರಾದ ಮೇಲೂ ಅಳಿಸಲಾಗದ ಗುರುತಾಗುತ್ತದೆ; ಅದು ಮಕ್ಕಳ ಪ್ರವೃತ್ತಿಯನ್ನೇ ಬದಲಾಯಿಸಿ, ಒಬ್ಬ ದುರ್ಬಲ ವ್ಯಕ್ತಿಯ ನಿರ್ಮಾಣಕ್ಕೆ ಕಾರಣವಾಗುತ್ತದೆ. ಮಗು ತನ್ನ ಆಂತರಿಕ ಶಕ್ತಿಯಿಂದಲೇ ಬೆಳೆಯುತ್ತದೆ ಎಂಬುದನ್ನು ದೊಡ್ಡವರು ಅರಿಯಬೇಕು; ತಮ್ಮಿಂದಲೇ ಮಗುವಿನ ಬೆಳವಣಿಗೆ ಸಾಧ್ಯ ಎಂಬ ಅಹಂಕಾರ ವನ್ನು ಬಿಡಬೇಕು. 'ಅಲುಗಾಡದೆ ಕುಳಿತು ಪಾಠ ಕೇಳುವುದೇ ಒಳ್ಳೆಯತನ' ಎಂಬ ಅವೈಜ್ಞಾನಿಕ ಮನೋಧರ್ಮವನ್ನು ಶಿಕ್ಷಕರು ತ್ಯಜಿಸಬೇಕು. ಜಗತ್ತಿನ ಬಗೆಗಿನ ನಮ್ಮ ಚಿತ್ರಣವನ್ನೂ, ನಮ್ಮತನವನ್ನೂ ಮಗುವಿನ ಮೇಲೆ ಹೇರುವುದು ಹಾಗೂ 'ಮಗು ಅಪ್ರಾಪ್ತ ವಯಸ್ಕ, ಚಿಕ್ಕವ' ಎಂದು ತಿಳಿದೂ ತಿಳಿದೂ, ತನಗಿಂತ ಭಿನ್ನವಾದ ಆತನ ಸ್ವತಂತ್ರ ವ್ಯಕ್ತಿತ್ವದೆಡೆಗೆ ಗಮನ ಹರಿಸದಿರುವುದು, ಪೋಷಕರು ಮತ್ತು ಶಿಕ್ಷಕರು ಮಾಡುವ ಬಹು ದೊಡ್ಡ ತಪ್ಪು. ವಿಪರ್ಯಾಸವೆಂದರೆ ಮಗುವಿನ ಅಂತ ರಂಗದ ಆಕ್ರಂದನದ ದನಿ ಇವರಾರಿಗೂ ಕೇಳಿಸದು. ಎಂಥ ಪರಿಸ್ಥಿತಿಯೆಂದರೆ, ಮಕ್ಕಳ ಮೇಲೆ ದಬ್ಬಾಳಿಕೆ ನಡೆಸುವವರೇ ತಾವು ಅದರ ಪರವಾಗಿ ಹೋರಾಡುತ್ತಿದ್ದೇವೆ ಎಂದುಕೊಳ್ಳುತ್ತಾರೆ! ಇನ್ನೂ ವಿಶೇಷವೆಂದರೆ ದಬ್ಬಾಳಿಕೆ ನಡೆಸುವವರೇ, ತಮ್ಮ ಗುಲಾಮರಂತೆ ಇರುವ ಮಕ್ಕಳನ್ನು ಪ್ರೀತಿಸುತ್ತಿರುವುದು! ಆ ಮೂಲಕ ತಮ್ಮಂತೆಯೇ, ತಮ್ಮ ಪ್ರತಿಬಿಂಬವಾಗಿ, ತಮ್ಮ ಪ್ರತಿಕೃತಿಯಾಗಿ ಮಗುವನ್ನು ರೂಪಿಸಬಹುದೆಂಬ ಪ್ರಯತ್ನ ಅವರದು! ಎಂಥ ವಿಪರ್ಯಾಸ!

"ಬೆಳವಣಿಗೆಯ ಮುಖ್ಯ ಆವಶ್ಯಕತೆ ಸ್ವಾತಂತ್ರ್ಯ", "ಶಿಕ್ಷಣ ವೆಂದರೆ ಈಗಾಗಲೇ ಮನುಷ್ಯನಲ್ಲಿ ಇರುವ ಪರಿಪೂರ್ಣತೆ ಯನ್ನು ಪ್ರಕಾಶಪಡಿಸುವುದು", "ಯಾವ ತರಬೇತಿಯ ಮೂಲಕ ಇಚ್ಛಾಶಕ್ತಿಯ ಪ್ರವಾಹ ಮತ್ತು ಅಭಿವ್ಯಕ್ತಿಗಳು ನಿಯಂತ್ರಣಕ್ಕೆ ಒಳಗಾಗಿ ಫಲಕಾರಿಯಾಗುವುವೋ ಅದೇ ಶಿಕ್ಷಣ" – ಸ್ವಾಮಿ ವಿವೇಕಾನಂದರ ಈ ಸೂಕ್ತಿಗಳಲ್ಲಿ ಕಂಡು ಬರುವುದೂ, ಮಾಂಟೆಸರಿಯವರು ಸಂಶೋಧನೆ ಮಾಡಿ ಕಂಡುಕೊಂಡ ವಿಚಾರವೂ ಒಂದೇ ಆಗಿರುವುದನ್ನು ನಾವು ಗಮನಿಸಬಹುದು. ಸ್ವಾಮೀಜಿಯವರು ಒಂದೆಡೆ ಹೀಗೆನ್ನುತ್ತಾರೆ: "ವಿದ್ಯಾಭ್ಯಾಸದ ಸಾರವೇ ಮನಸ್ಸಿನ ಏಕಾಗ್ರತೆ, ಬರಿಯ ವಿಷಯಸಂಗ್ರಹವಲ್ಲ. ನಾನು ಪುನಃ ವಿದ್ಯಾಭ್ಯಾಸವನ್ನು ಪ್ರಾರಂಭಿಸಬೇಕೆಂದಿದ್ದರೆ, ಮೊದಲು ಮನಸ್ಸನ್ನು ಹೇಗೆ ಏಕಾಗ್ರ ಗೊಳಿಸುವುದು ಮತ್ತು ಅದನ್ನು ಹೇಗೆ ಹಿಂದಕ್ಕೆ ಸೆಳೆಯು ವುದು ಎಂಬುದನ್ನು ಕಲಿತುಕೊಂಡು, ನನ್ನ ಇಚ್ಛೆಯ ಪ್ರಕಾರ ವಿಷಯಗಳನ್ನು ಸಂಗ್ರಹಿಸುತ್ತೇನೆ." ಹೀಗೆ ಸ್ವಾಮಿ ವಿವೇಕಾ ನಂದರ ಚಿಂತನೆಗೂ, ಮರಿಯಾ ಮಾಂಟೆಸರಿಯವರ ಆಲೋಚನೆಗಳಿಗೂ ಅನೇಕ ಸಾಮ್ಯಗಳಿರುವುದು ನಮಗೆ ತಿಳಿದುಬರುತ್ತದೆ.

ಮಗು ತನ್ನ ಆರನೆಯ ವಯಸ್ಸಿಗೆ ಶಾಲೆಗೆ ಹೋಗಲು ಆರಂಭಿಸಬೇಕು ಎಂಬುದು ಹಿಂದಿನಿಂದಲೂ ಒಪ್ಪಿಕೊಂಡು ಬಂದ ಪದ್ಧತಿ. ಕೈಗಾರಿಕಾ ಕ್ರಾಂತಿಯ ನಂತರ ಅನೇಕ ಕುಟುಂಬಗಳು ನಗರಗಳಿಗೆ ವಲಸೆ ಹೋಗಬೇಕಾದ ಸಂದರ್ಭ ಒದಗಿಬಂದಿತು. ಇದಲ್ಲದೆ, ತಂದೆ–ತಾಯಿಗಳಿಬ್ಬರೂ ದುಡಿಯಲೇಬೇಕಾದ ಪರಿಸ್ಥಿತಿ ಉಂಟಾಯಿತು. ಹೀಗಾಗಿ ಅಷ್ಟು ದೀರ್ಘಕಾಲ ಮಗುವನ್ನು ಮನೆಯಲ್ಲಿ ಇರಿಸಿಕೊಳ್ಳುವುದೇ ಒಂದು ಸಮಸ್ಯೆಯಾಯಿತು. ಆಗ ಅಸ್ತಿತ್ವಕ್ಕೆ ಬಂದ 'ಮಕ್ಕಳ ಮನೆ' ಕ್ರಶ್, ಕಿಂಡರ್‌ಗಾರ್ಟನ್‌ಗಳು ಒಂದು ವರದಾನವೇ ಎಂಬಂತೆ ತೋರಿತು. ತತ್ತ್ವಜ್ಞಾನಿ ಫ್ರೊಬೆಲ್, ವಿಜ್ಞಾನಿ ಮಾಂಟೆಸರಿಯವರ ವಿಚಾರಗಳು ಜನರ ಗಮನ ಸೆಳೆದುದು ಹೀಗೆ. ಕನ್ನಡನಾಡಿನಲ್ಲಿ ಡಾ. ಎಂ.ವಿ. ಗೋಪಾಲಸ್ವಾಮಿ,